ಓ.ಎಸ್. ನಂಃ 4 ಃ 2013
ಡಿಡಬ್ಲೂ-1

ದಿನಾಂಕಃ 16.04.2016 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ವಾದಿಪರ ಶ್ರೀ ಎಸ್ ಜಿ ಹೆಚ್ ವಕೀಲರಿಂದಃ

ನಾನು 1968 ರಿಂದ 2006 ರವರೆಗೆ ಬೇರೆ ಬೇರೆ ಇಲಾಖೆಗಳಲ್ಲಿ ಮತ್ತು ವಿದೇಶದಲ್ಲಿ ಕೆಲಸ ಮಾಡುತ್ತಾ ಇದ್ದೆನು ಎಂದರೆ ಸರಿ. ಸಾಕ್ಷಿ ಮುಂದುವರೆದು ಮಧ್ಯದಲ್ಲಿ ಕೆಲವು ಸಮಯದವರೆಗೆ ಕೆಲಸ ನಿರ್ವಹಿಸಿಲ್ಲ ಮತ್ತು ಆಗ ಊರಿಗೆ ಬಂದಿದ್ದು ಇರುತ್ತದೆ ಎಂದು ನುಡಿಯುತ್ತಾರೆ. 1968 ರಿಂದ 2006 ರವರೆಗೆ ನಾನು ಯಾವುದೇ ಜಮೀನಿನ ಸಾಗುವಳಿ ಮಾಡಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ನಾನು ಫೋನ ಮುಖಾಂತರ ಮತ್ತು ಬೇರೆ ರೀತಿಯಲ್ಲಿ ಜಮೀನಿನ ದೇಖರೇಖಿ ನೋಡಿಕೊಳ್ಳುತ್ತಿದ್ದೆನು ಎಂದು ನುಡಿದಿರುತ್ತಾರೆ. ಅರ್ಜುಣಗಿ ಗ್ರಾಮದಲ್ಲಿ ಜಮೀನುಗಳು ಮಂಜೂರಾಗಬೇಕಾದರೆ ನನ್ನ ತಂದೆಯೇ ಕಾರಣ ಎಂದರೆ ಸರಿಯಲ್ಲ, 1968 ರಿಂದ 2006 ರವರೆಗೆ ನಾನು ಜಮೀನನ್ನು ವಯಕ್ತಿಕವಾಗಿ ಸಾಗುವಳಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿಗೆ ನೀವು ಯಾವ ದಿನಾಂಕ ತಿಂಗಳು ಮತ್ತು ವರ್ಷದಲ್ಲಿ ಸರಕಾರಕ್ಕೆ ಜಮೀನು ಮಂಜೂರು ಮಾಡಲು ಅರ್ಜಿ ಸಲ್ಲಿಸಿದ್ದೀರಿ ಎಂದು ಕೇಳಿದಾಗ ನಾನು 1980 ರಲ್ಲಿ ಅರ್ಜಿ ನೀಡಿರುತ್ತೀರಿ. ನಂತರ ವರ್ಷಕ್ಕೊಮ್ಮೆ ಆ ಬಗ್ಗೆ ಕ್ರಮ ಕೈಗೊಳ್ಳಲು ಅರ್ಜಿ ನೀಡಿರುತ್ತಾರೆ. ಸರಕಾರದವರು ನನ್ನ ಯಾವ ವರ್ಷದ ಅರ್ಜಿಯನ್ನು ಪರಿಗಣಿಸಿ ಜಮೀನು ಮಂಜೂರು ಮಾಡಿರುತ್ತಾರೆಂದು ಹೇಳಲು ಬರುವದಿಲ್ಲ, ಸಾಕ್ಷಿಗೆ ಪ್ರತಿವಾದಿ ನಂ.3 ಇವರಿಗೆ ಬರೆದ ಒಂದು ಪತ್ರದ ಲಕೋಟೆ ಮತ್ತು ಪತ್ರ ತೋರಿಸಿದಾಗ ಸಾಕ್ಷಿ ನೋಡಿ ಗುರುತಿಸಿ ಲಕೋಟೆಯನ್ನು ನಾನೇ ಬರೆದಿರುತ್ತೇನೆ ಮತ್ತು ಪತ್ರವನ್ನು ನಾನೇ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಈಗ ನೋಡಲಾದ ಪತ್ರ ಅದೇ ಲಕೋಟೆಯಿಂದ ತೆಗೆದಿದ್ದರ ಕುರಿತು ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಲಕೋಟೆಯನ್ನು ನಿಪಿ-9 ಎಂದು ಮತ್ತು ಪತ್ರವನ್ನು ನಿಪಿ-10 ಎಂದು ಗುರುತಿಸಲಾಯಿತು. ನಿಪಿ-10 ರಲ್ಲಿ ಬರೆದ ವಿಷಯಗಳು ಸರಿ ಇರುತ್ತವೆ.

ನಿಪಿ-9, ನಿಪಿ-10 ದಾಖಲಾತಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸರಕಾರಕ್ಕೆ ಜಮೀನು ಮಂಜೂರು ಮಾಡಲು ಕೋರಿ ಸಲ್ಲಿಸಿದ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ನಾನು ಮತ್ತು ಪ್ರತಿವಾದಿ ನಂ.3 ಕೆಲಸಕ್ಕೆಂದು ಹೊರಗೆ ಹೋಗಿದ್ದೆವು ಮತ್ತು ಅರ್ಜುಣಗಿ ಗ್ರಾಮದಲ್ಲಿ ನನ್ನ ತಂದೆ ಮತ್ತು ಇನ್ನೊಬ್ಬ ಸಹೋದರ ಇಬ್ಬರೂ ಮನೆ ಜಮೀನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಸಹೋದರ ಸಿದ್ದರಾಮಯ್ಯ ಎಲ್ಲಿಯೂ ಕೆಲಸ ನಿರ್ವಹಿಸುತ್ತಿರಲಿಲ್ಲ, ಸದರಿ ಸಹೋದರನಿಗೆ ಸರ್ವೆ ನಂ.65 ರಲ್ಲಿ 4-ಎಕರೆ ಜಮೀನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಪ್ಪನಿಗೂ ಸಹ ಸರಕಾರದವರು ಜಮೀನು ಮಂಜೂರು ಮಾಡಿರುತ್ತಾರೆ. 1991-92 ರಲ್ಲಿ ತಹಸಿಲ್ದಾರ ಅಫಜಲಪೂರ ಇವರು ಯಾರು ಯಾರಿಗೆ ಜಮೀನು ಮಂಜೂರು ಮಾಡಿದ್ದರ ಕುರಿತು ಮುಟೇಷನ ಆದೇಶ ಮಾಡಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿ ಸರಿ ಎಂದು ತಿಳಿಸಿರುತ್ತಾರೆ. ಕಾರಣ ಮುಟೇಷನ ಆದೇಶದ ಪ್ರತಿಯನ್ನು ನಿಪಿ-11 ಎಂದು ಗುರುತಿಸಲಾಯಿತು. ಅರ್ಜುಣಗಿ ಗ್ರಾಮದಲ್ಲಿರುವ ಸರ್ವೆ ನಂ.52 ಃ ಎ ಇದು ಇನಾಮ ಜಮೀನು ಎಂದರೆ ಸರಿ. ಸದರಿ ಜಮೀನನ್ನು 1989 ಜುಲೈ 18 ರಂದು ಸರಕಾರದವರು ರಿಗ್ರ್ಯಾಂಟ ಮಾಡಿ ನನ್ನ ತಂದೆಯ ಹೆಸರಿಗೆ ಜಮೀನನ್ನು ನೀಡಿರುತ್ತಾರೆ. ಸರ್ವೆ ನಂ.65 ಜಮೀನನ್ನು ನಮ್ಮ ಕುಟುಂಬಕ್ಕೆ ಮಂಜೂರು ಮಾಡುವ ಮೊದಲು ಸರ್ವೆ ನಂ.52 ಃ ಎ ಜಮೀನು ನಮ್ಮ ಕುಟುಂಬಕ್ಕೆ ಮಂಜೂರಾಗಿತ್ತು ಎಂದರೆ ಸರಿ. ಸರ್ವೆ ನಂ.52 ಃ ಎ ರಲ್ಲಿ ರಿಗ್ರ್ಯಾಂಟ ಆದಾಗ ನನ್ನ ಮತ್ತು ನನ್ನ ಸಹೋದರರು ಪಾಲು ಸದರಿ ಜಮೀನಿನಲ್ಲಿ ಇತ್ತು ಎಂದರೆ ಸರಿ. ಸರ್ವೆ ನಂ.52 ಃ ಎ ಜಮೀನು ಇದ್ದಾಗಲೂ ನಾನು ನನಗೆ ಜಮೀನು ಇಲ್ಲ ಎಂದು ಸುಳ್ಳು ಅರ್ಜಿ ಸಲ್ಲಿಸಿ ಸ.ನಂ.65 ಮಂಜೂರು ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಸ,ನ, 52 ಃ ಎ ಜಮೀನು ಆಗ ನನ್ನ ಮತ್ತು ನನ್ನ ತಂದೆಯ ಹೆಸರಿಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸ.ನಂ.52 ಃ ಎ ಯಾರಿಗೆ ಮಂಜೂರಾಗಿತ್ತು ಎಂದು ಕೇಳಿದಾಗ ಸಾಕ್ಷಿ ನನ್ನ ತಂದೆಯವರ ಹೆಸರಿಗೆ ಆಗಿತ್ತು ಆದರೆ ಪ್ರತಿವಾದಿ ನಂ.3 ದಾಖಲಾತಿ ತಿದ್ದುಪಡಿ ಮಾಡಿ ಉತಾರದಲ್ಲಿ ತನ್ನ ಹೆಸರಿನಲ್ಲಿ ಮಾಡಿಕೊಂಡಿದ್ದ ಎಂದು ನುಡಿದಿರುತ್ತಾರೆ. ಪ್ರತಿವಾದಿ ನಂ.3 ಮ್ಯಾನುಪ್ಯುಲೇಟ ಮಾಡಿದ ಕುರಿತು ದಾಖಲೆ ಹಾಜರುಪಡಿಸಿದ್ದೀರಾ

ಎಂದರೆ ಸಾಕ್ಷಿ ನಾನು ದಾಖಲಾತಿಗಳನ್ನು ವಕೀಲರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಸರ್ವೆ ನಂ. 65 ಮತ್ತು 52 ಜಮೀನು ನಮ್ಮ ತಂದೆಯವರ ಕಾರಣದಿಂದ ನಮ್ಮ ಕುಟುಂಬಕ್ಕೆ ಮಂಜೂರಾಗಿರುತ್ತದೆ ನಾನು ನೌಕಾದಳದಲ್ಲಿ ಸೇವೆ ಸಲ್ಲಿಸಿದ್ದಕ್ಕೆ ಜಮೀನು ಮಂಜೂರಾಗಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ಸಹೋದರರು ವಾಸಕ್ಕಾಗಿ ಮಾತ್ರ ಬೇರೆ ಬೇರೆ ಇರುತ್ತೇವೆ ಆದರೆ ನಮ್ಮ ಜಮೀನುಗಳನ್ನು ಇನ್ನೂ ಪಾಲು ವಾಟ್ನಿಯಾಗಿರುವದಿಲ್ಲ. ಸರ್ವೆ ನಂ.65 ನನ್ನ ಮತ್ತು ನನ್ನ ಸಹೋದರ ಹೇಸರಿನಲ್ಲಿ 1991-92 ರಿಂದ ಇರುತ್ತದೆ. ಸಐನ.52 ಃ ಎ ಪ್ರತಿವಾದಿ ನಂ.3 ಇವರ ಹೆಸರಿನಲ್ಲಿ 1989 ರಿಂದ ಇರುತ್ತದೆ ಮತ್ತು ಮನೆ ಮೊದಲಿನಿಂದಲೂ ನನ್ನ ತಂದೆಯ ಹೆಸರಿನಲ್ಲಿರುತ್ತದೆ. ನನ್ನ ತಾಯಿಗೆ ಯಾವುದೇ ಜಮೀನು ಅಥವಾ ಮನೆ ಕೊಟ್ಟಿರುವದಿಲ್ಲ ಸಾಕ್ಷಿ ಮುಂದುವರೆದು ಆಕೆಯನ್ನು ನಾನು ನೋಡಿಕೊಳ್ಳುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಅದೇ ರೀತಿ ನನ್ನ ಸಹೋದರಿಯರಿಗೂ ಯಾವುದೆ ಜಮೀನು ಮತ್ತು ಮನೆ ನೀಡಿಲ್ಲ. ಸಾಕ್ಷಿ ಮುಂದುವರೆದು ಕಾರಣ ಅವರು ಕೇಳಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ಹೊರತುಪಡಿಸಿ ಸೋಲಾಪೂರದಲ್ಲಿ ಪ್ರತಿವಾದಿ ನಂ.3 ರ ಇವರ ಹೆಸರಿನಲ್ಲಿ ಜಂಟಿ ಕುಟುಂಬದ ಆಸ್ತಿಗಳು ಇರುತ್ತವೆ. ಸೋಲಾಪೂರದಲ್ಲಿರುವ ಮನೆಯನ್ನು ಪ್ರತಿವಾದಿ ನಂ.3 ತನ್ನ ಹೆಸರಿನಲ್ಲಿ ಖರೀದಿಸಿರುತ್ತಾನೆ. ಸೋಲಾಪೂರದ ಮನೆ ಖರೀದಿಸಲು ನಮ್ಮ ಮನೆತನದ ಹಣದಿಂದ ಖರಿದಿಸಿರುತ್ತೇವೆ ಎಂದು ತೋರಿಸಲು ಯಾವುದೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ಅರ್ಜುಣಗಿ ಗ್ರಾಮದಲ್ಲಿರುವ ಮನೆಯನ್ನು ನಾನು ಪ್ರತಿವಾದಿ ನಂ.2 ಮತ್ತು 3 ಕಬ್ಜೆಯಲ್ಲಿರುತ್ತೇವೆ. ಸ.ನಂ.65 ಪ್ರತಿವಾದಿ ನಂ.2 ಮತ್ತು ನಾನು ಕಬ್ಜೆ ಹೊಂದಿರುತ್ತೇವೆ. ಸ.ನಂ.52 ಃ ಎ ಪ್ರತಿವಾದಿ ನಂ.3 ಈತನ ಕಬ್ಜೆಯಲ್ಲಿರುತ್ತದೆ. ನಾವು ದಾವಾ ಮನೆಯನ್ನು ಹಂಚಿಕೊಳ್ಳುವಾಗ ಜಮೀನು ಹಂಚಿಕೊಳ್ಳಲು ಪ್ರತಿವಾದಿ ನಂ.3 ಒಪ್ಪಲಿಲ್ಲ. ಕಾರಣ ಜಮೀನಿನಲ್ಲಿ ಪಾಲು ಆಗಿರುವುದಿಲ್ಲ. ದಾವಾ ಮನೆಯನ್ನು ಪಾಲು ಮಾಡಿಕೊಳ್ಳುವಾಗ ನಮ್ಮ ತಾಯಿಗೆ ಯಾವುದೇ ಹಿಸ್ಸೆ ನೀಡಿಲ್ಲ. ಸಾಕ್ಷಿಗೆ ಒಂದು ಬಾಂಡ ಪತ್ರದಲ್ಲಿ ಸಹಿ ತೋರಿಸಿ ಯಾರದು ಎಂದು ಕೇಳಿದಾಗ ಸಾಕ್ಷಿ ತನ್ನದೇ ಎಂದು ನುಡಿದಿರುತ್ತಾರೆ.

ಸದರಿ ದಾಖಲಾತಿಯಲ್ಲಿ ಸಾಕ್ಷಿದಾರರ ಹೆಸರು ಮತ್ತು ಅವುಗಳನ್ನು ಅವರ ಸಹಿ ಇರುತ್ತದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಾನು 2015 ಮೇ ನಲ್ಲಿ ಬರೆದುಕೊಟ್ಟಿರುತ್ತೇನೆ. ಸದರಿ ದಾಖಲಾತಿಯನ್ನು ನಾನು ಓದಿ ತಿಳಿದು ಸಹಿ ಮಾಡಿರುತ್ತೇನೆ. ನನ್ನ ತಾಯಿಗೆ ಮನೆಯಲ್ಲಿ ಪಾಲು ಕೊಡಬಾರದೆಂದು ಸುಳ್ಳು ದಾಖಲೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ನೋಡಿ ಗುರುತಿಸಿದ ದಾಖಲಾತಿಯನ್ನು ನಿಪಿ-12 ಎಂದು ಗುರುತಿಸಲಾಯಿತು. ನನ್ನ ತಾಯಿ ಮತ್ತು ಸಹೋದರಿಯರಿಗೆ ದಾವಾ ಆಸ್ತಿಯಲ್ಲಿ ಸಮನಾದ ಹಿಸ್ಸೆ ಇರುತ್ತದೆ ಎಂದರೆ ಸಾಕ್ಷಿ ಸ.ನಂ.65 ಜಮೀನನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ಹಿಸ್ಸೆ ಇದೆ ಎಂದು ನುಡಿಯುತ್ತಾರೆ.

ಪಾಟಿ ಸವಾಲು ಪ್ರತಿವಾದಿ ನಂ.3 ಸಿಎಸ್‌ಹೆಚ್ ವಕೀಲರಿಂದಃ

ಪ್ರತಿವಾದಿ ನಂ.3 ಸ.ನಂ.52 ಜಮೀನನ್ನು 1989 ರಲ್ಲಿ ತನ್ನ ಹೆಸರಿಗೆ ಹಚ್ಚಿಕೊಂಡಿರುತ್ತಾನೆ. ಆ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು. ನನ್ನ ತಂದೆಯವರೇ ಪ್ರತಿವಾದಿ ನಂ.3 ರ ಹೆಸರಿಗೆ ಸದರಿ ಜಮೀನು ಮುಟೇಷನ ಮಾಡಿಸಿರುತ್ತಾರೆಂದರೆ ಸರಿಯಲ್ಲ. ಸೊಲಾಪೂರದಲ್ಲಿರುವ ಪ್ರತಿವಾದಿ ನಂ.3 ಇವರ ಮನೆ ಪ್ರತಿವಾದಿ ನಂ.3 ಸ್ವಂತ ಗಳಿಸಿದ ಆಸ್ತಿ ಎಂದರೆ ಸರಿಯಲ್ಲ. ಪ್ರತಿವಾದಿ ನಂ.3 ಪರ ವಕೀಲರು ವಾದಿಯ ಪಾಟಿ ಸವಾಲನ್ನು ಅಳವಡಿಸಿಕೊಳ್ಳುವದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಅಫಜಲಪುರ